ಹಾಗಾದರೆ ನಾವೊಂದು ಪಣ ಕಟ್ಟುವ. ಏನಂತೀಯ?' ಹುಡುಗನನ್ನು ನೋಡುತ್ತಾ ಅವನು ನಕ್ಕ.

'ನಾನು ತಯಾರಾಗಿದ್ದೇನೆ ಅಂಕಲ್!' ಹುಡುಗ ಹೇಳಿದ.

'ಪಣ ಕಟ್ಟಲು ನೀನು ತಯಾರಾಗಿದ್ದೀಯಾ!?'

'ಪಣ ಕಟ್ಟಿ ನನಗೆ ಅಭ್ಯಾಸವಿದೆ.'

ಮುದುಕ ಮಾತನಾಡಲಿಲ್ಲ. ಅವನು ಗಂಭೀರವಾಗಿ ತನ್ನ ಸಿಗಾರನ್ನು ಪರೀಕ್ಷಿಸುವುದರಲ್ಲಿ ಮಗ್ನನಾಗಿದ್ದ. ಅವನು ನಟಿಸುತ್ತಿರುವವನಂತೆ ನನಗೆ ಭಾಸವಾಯಿತು. ಅದು ನನಗೆ ಇಷ್ಟವಾಗಲಿಲ್ಲ. ಹುಡುಗನನ್ನು ಅವಮಾನಿಸಲು ಅವನು ಮೊದಲೇ ನಿರ್ಧರಿಸಿದಂತಿತ್ತು ಮತ್ತು ಇದರಿಂದ ವಿಲಕ್ಷಣ ಸುಖ ಅನುಭವಿಸುತ್ತಿರುವವನಂತೆ ಕಾಣಿಸಿದ.

ಅವನು ಸಿಗಾರಿನಿಂದ ಕಣ್ಣೆತ್ತಿ ಹುಡುಗನ ಕಡೆಗೆ ದೃಷ್ಟಿಯನ್ನು ಹರಿಸಿದ. 'ಪಣ ಕಟ್ಟುವುದು ನನ್ನ ಜೀವಮಾನದ ಒಂದೇ ಒಂದು ನೆಚ್ಚಿನ ಹವ್ಯಾಸ. ನಾವಿಬ್ಬರೂ ಒಂದು ಪಣ ಕಟ್ಟುವ. ಅಂತಹದೊಂದು ಮಜಾ ಜೀವಮಾನದಲ್ಲಿ ಈ ಮೊದಲು ಎಂದಿಗೂ ಅನುಭವಿಸಿರಬಾರದು! ಏನಂತಿಯಾ ಹುಡುಗ?'

'ಸ್ವಲ್ಪ ತಡೀರಿ ಅಂಕಲ್. ಭಾರಿ ಮೊತ್ತದ ಪಣ ಕಟ್ಟಲು ನನ್ನಿಂದ ಸಾಧ್ಯವಿಲ್ಲ. ಕಾಲು ಡಾಲರೋ, ಹೆಚ್ಚೆಂದರೆ ಒಂದು ಡಾಲರ್!' ಹುಡುಗ ಹೇಳಿದ.

ಮುದುಕ ಕೈಗಳನ್ನು ಗಾಳಿಯಲ್ಲಿ ಆಡಿಸುತ್ತಾ ಹೇಳಿದ. 'ಇವೆಲ್ಲಾ ಎಂತಹ ಪುಟಗೋಸಿ ಪಣಗಳು! ಪಣವೆಂದರೆ ಅಂತಿಂತಾ ಪಣವಲ್ಲ! ಜೀವನದ ಪರಮಾನಂದವನ್ನು ಸವಿಯುವಂತಾಗಿರಬೇಕು. ನಾವು ನನ್ನ ರೂಮಿಗೆ ಹೋಗುವ. ಇಲ್ಲಿಯ ಹಾಗೆ ಅಲ್ಲಿ ಗಾಳಿ ಇಲ್ಲ. ಒಂದೇ ಒಂದು ಭಾರಿಯೂ ಕೈಕೊಡದೆ ಹತ್ತಕ್ಕೆ ಹತ್ತುಸಲವೂ ನಿನ್ನ ಲೈಟರ್ ಉರಿದರೆ ನೀನು ಪಣ ಗೆದ್ದಂತೆ!'

'ಓಹ್, ನಾನು ರೆಡಿ!' ಹುಡುಗನ ಕಣ್ಣಳು ಮಿಂಚಿದವು.

'ಸರಿ ಹಾಗಾದರೆ. ಆದರೂ, ಮತ್ತೊಮ್ಮೆ ಯೋಚಿಸು...'

'ಯೋಚಿಸುವುದೇನಿಲ್ಲ. ನನ್ನ ಕಡೆಯಿಂದ ಒಂದು ಡಾಲರ್ ಪಣವೊಡ್ಡುತ್ತೇನೆ!'

'ನಾನು ಎಂತಹ ಪಣ ಕಟ್ಟುತ್ತಿದ್ದೇನೆಂದರೆ, ಕೇಳಿ ನೀನು ಮೂರ್ಛೆ ಹೋಗುತ್ತೀಯಾ ಹುಡುಗ! ನಾನು ಶ್ರೀಮಂತ. ನನ್ನ ಘನತೆಗೆ ತಕ್ಕಂತಹ ಪಣ ಕಟ್ಟುತ್ತೇನೆ. ಹೋಟಲಿನ ಪಾರ್ಕಿಂಗಿನಲ್ಲಿ ನನ್ನ ಕ್ಯಾಡಿಲಾಕ್ ಕಾರು ನಿಂತಿದೆ. ಅದು ನಿನ್ನದೇ ದೇಶದಲ್ಲಿ ತಯಾರಾದ ಕಾರು!'

'ಹೇಯ್, ಹೇಯ್ ಅಂಕಲ್! ಇದು ನನ್ನ ಯೋಗ್ಯತೆಗೆ ಮೀರಿದ ಪಣ. ನಾನಿನ್ನೂ...'

'ಒಮ್ಮೆಗೇ, ಆರದಂತೆ ಹತ್ತು ಭಾರಿ ಲೈಟರ್ ಹತ್ತಿಸುವುದು ನಿನ್ನ ಯೋಗ್ಯತೆಗೆ ಮೀರಿದ್ದೇ? ನಿನಗೆ ಕ್ಯಾಡಿಲಾಕ್ ಕಾರು ಬೇಕಿದ್ದರೆ ಮತ್ತೊಮ್ಮೆ ಯೋಚಿಸಿ ನೋಡು...' ಮುದುಕ ಹುಡುಗನನ್ನು ಕೆರಳಿಸಿದ.

'ನನಗೆ ಕ್ಯಾಡಿಲಾಕ್ ಬೇಕು!' ಹುಡುಗ ಉದ್ವೇಗದಿಂದ ಹೇಳಿದ.

'ಹಾಗಾದರೆ ನಮ್ಮ ಪಣವನ್ನು ಅಧಿಕೃತವಾಗಿ ಜಾರಿಗೊಳಿಸೋಣ. ಕ್ಯಾಡಿಲಾಕ್ ನಿನ್ನದು!' ಎಂದು ಮುದುಕ ಹೇಳಿದ.

'ಆಯ್ತು. ನಾನೇನು ಪಣವೊಡ್ಡಬೇಕು?' ಹುಡುಗ ಕಾತುರದಿಂದ ಕೇಳಿದ.